# ನೀವು ಕೇಳಿದಿರಿ?

ಮಾಲತಿರಾಜು, ಬೆಂಗಳೂರು
*ಗೆದ್ದ ಎತ್ತಿನ ಬಾಲ ಹಿಡಿಯೋ ರಾಜಕಾರಣಿಗಳನ್ನ ಏನೆನ್ನ ಬೇಕು?*



ಸಗಣಿ ತಿನ್ನೋಕೂ ಹೇಸಲ್ಲ ಎನ್ನಬೇಕು!

ರಾಜು ಎಸ್. ಗಾಲಿ, ಅಥಣಿ
*ಸರ್ಕಾರಿ ನೌಕರಿಯಲ್ಲಿ ಇದ್ದರೆ ಮಾತ್ರ ಹೆಣ್ಣು ಕೊಡುತ್ತಾರಲ್ಲಾ, ಉಳಿದವರ ಗತಿಯೇನು ಗುರು?*
ಲವ್ ಮ್ಯಾರೇಜ್ ಮಾಡಿಕೊಳ್ಳಲಿ ಸಿಸ್ಯಾ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
*ಕಡುಬಡವರನ್ನು ಉದ್ಧಾರ ಮಾಡಲು ಕೇಂದ್ರ ಸರ್ಕಾರ ದುಡ್ಡಿನ ಗಿಡ ಕೊಟ್ಟರೆ?*
ಮಣ್ಣನ್ನು ಮಣ್ಣಿನ ಮಕ್ಕಳು, ಗೊಬ್ಬರವನ್ನು ಲಾಲೂ ತಿಂದ ಮೇಲೆ ಗಿಡ ಬೆಳೆಯದೆ ಸಸಿಯಲ್ಲೇ ಮುರುಟುವುದಂತೆ!

ಎಂ.ಎಸ್.ವಾಗೇಶಾಚಾರ್, ಬಿಜಾಪುರ
*ಕವಿಗಳು ಯಾವಾಗಲೂ ಹೆಣ್ಣಿನ ಸೌಂದರ್ಯವನ್ನು ವರ್ಣಿಸುವುದು ಏತಕ್ಕಾಗಿ?*
ಅಬಲೆ ಭಲೆ ಎಂದು ಮೆಚ್ಚಿ ಬರಲೆಂದು!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ದೇವರಿಲ್ಲ, ಹೆಂಡತಿಗಿಂತ?*
ಅವರವರ ಅನುಭವಕ್ಕೆ ತಕ್ಕಂತೆ ದೇವಿ/ಮೂದೇವಿ ಇಲ್ಲ!

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್
*ಬೆಸ್ತರು ಬೀಸುವ ಬಲೆಗೂ, ಲೋಕಾಯುಕ್ತರು ಬೀಸುವ ಬಲೆಗೂ ಇರುವ ವ್ಯತ್ಯಾಸವೇನು?*
ಬೆಸ್ತರ ಬಲೆಯಿಂದ ನಡೆಯುವುದು ಬಾಳು, ಲೋಕಾಯುಕ್ತರ ಬಲೆಯೋ ಬರೀ ಜಾಳು!

ಜೆ.ಶಿವಪ್ರಸಾದ್, ಬೆಂಗಳೂರು
*ಸಿಂಗ್ ದಿ ಕಿಂಗ್ ತಮ್ಮ ಎರಡನೆಯ ಇನ್ನಿಂಗ್ಸ್‌ನಲ್ಲಿ ಸ್ವಂತ ಬಲದಿಂದಲೇ ದೇಶದ ಸಮಸ್ಯೆಗಳ ಕಡೆ ಒಲವು ತೋರುವರೆಂದು ಆಶಿಸೋಣವೇ?*
ಹುಚ್ಚಪ್ಪ! ಸೂತ್ರದ ಬೊಂಬೆಗಳಿಗೆ ಸ್ವಂತ ಬಲ ಇರುವುದಿಲ್ಲ!

ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ
*ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ತಮ್ಮ ಧರ್ಮಪತ್ನಿಯೊಂದಿಗೆ ಬಂದು ಮತದಾನ ಮಾಡುವುದರ ಗುಟ್ಟೇನು?*
ಅಧರ್ಮಪತ್ನಿಯೊಂದಿಗೆ ಬರಲಾಗದೆಂಬ ಏಕೈಕ ಕಾರಣ!

ಸೊಂ.ನಾ.ಶ್ರೀಧರಮೂರ್ತಿ, ದಾವಣಗೆರೆ
*ವಂಶಪಾರಂಪರ್ಯ ರಾಜಕಾರಣವನ್ನು ತಡೆಯುವ ಮಾರ್ಗವೇನು?*
ಬಹಳ ಸುಲಭ! ಮದುವೆಯಾಗದ, ಮಕ್ಕಳಾಗಲು ಸಾಧ್ಯವಿಲ್ಲದವರಿಗೆ ಮಾತ್ರ ಮತ ನೀಡಿದರಾಯ್ತು!

ಪ್ರೆಸ್ ರಾಜಾ, ದೊಡ್ಡಬಳ್ಳಾಪುರ
*ಮನುಷ್ಯನಿಗೆ ಫ್ಲಾಷ್‌ಬ್ಯಾಕ್ ಸೌಲಭ್ಯ ನಿಜ ಜೀವನದಲ್ಲಿ ಉಂಟೆ?*
ವಿವಾಹಿತರೆಲ್ಲರಿಗೂ ಉಂಟು. ಅವರ ಎಲ್ಲಾ ಹುಳುಕುಗಳನ್ನು ಫ್ಲಾಷ್‌ಬ್ಯಾಕ್‌ಗೆ ಕರೆದೊಯ್ದು ತೋರಿಸುವ ಅದ್ಭುತ ಶಕ್ತಿಯೇ ಪತ್ನಿ!

ಜಾಕೋಬ್ ಡಿಸೋಜ, ಕುರುವಳ್ಳಿ
*ನಿರಾಶೆ ಏನನ್ನು ಸೃಷ್ಟಿಸುತ್ತದೆ?*



ಬಾರ್‌ಗಳಿಗೆ ಹೊಸ ಹೊಸ ಗಿರಾಕಿಗಳನ್ನು!

ಕುಬೇರಪ್ಪ ಎಂ ವಿಭೂತಿ, ಹರಿಹರ
*ಮರುಮದುವೆಯಾದರೂ ಸತಿಯ ಸ್ಥಾನವನ್ನು ಸವತಿ ತುಂಬುತ್ತಿಲ್ಲ, ಕಾರಣವೇನಿರಬಹುದು?*
ಗೊತ್ತಾಯ್ತು ಬಿಡಿ; ಸತಿ ಡುಮ್ಮಿ, ಸವತಿ ಸಣಕಲಿ!

ಶ್ರೀಮತಿ ಸುನಂದ, ಗೌರಿಬಿದನೂರು
*ಗಂಡು ಹುಡುಗರು ಮದುವೆ ಆಗಿದ್ದಾರಾ, ಇಲ್ಲವಾ ಎಂದು ಹೇಗೆ ಕಂಡುಹಿಡಿಯುವುದು?*
ಬೀದಿಯಲ್ಲಿ ಕಂಡ ಕನ್ಯೆಯನ್ನು ಆಸೆಯಿಂದ ನೋಡುವವನು ಅವಿವಾಹಿತ, ಈರ್ಷ್ಯೆಯಿಂದ ನೋಡುವವನು ವಿವಾಹಿತ!

ಕಲ್ಪನಾ ಪ್ರಭಾಕರ ಹೆಗಡೆ, ಶಿರಸಿ
*ಬಟ್ಟೆ ಬದಲಾಯಿಸಿದಂತೆ ಗಂಡನನ್ನು ಬದಲಾಯಿಸುವ ಇಂದಿನ ಹೆಣ್ಣುಮಕ್ಕಳಿಗೆ ಮದುವೆ ಅರ್ಥವನ್ನು ತಿಳಿಸುವಿರಾ?*
ವಿವಾಹಕ್ಕೂ ವಿವಾದಕ್ಕೂ ವ್ಯತ್ಯಾಸವೇ ಹ ದ!
ಹದ ಹಿಡಿದರೆ ಮಧು, ಇಲ್ಲವಾದರೆ ವ್ಯಾ...!

## ಬಹುಮಾನಿತ ಪ್ರಶ್ನೆ

ಸವಿತಾ ಸಚ್ಚಿದಾನಂದ, ಬಸವನಹಳ್ಳಿ,
*ದೇಹದ ಯಾವುದೇ ಭಾಗಕ್ಕೆ ಹೆಚ್ಚು ಕೆಲಸವಾದರೆ ನೋವಾಗುತ್ತದೆ. ಆದರೆ ಗಂಟೆಗಟ್ಟಲೆ ಭಾಷಣ ಮಾಡುವವರ ಬಾಯಿ ಏಕೆ ನೋಯುವುದಿಲ್ಲ?*
ಯಾವುದೇ ನೋವಿಗೆ ಶಾಖ ನೀಡಿದರೆ ಕಡಿಮೆಯಾಗುತ್ತದೆ. ಭಾಷಣಿಗನ ಬಾಯಿಂದ ಬರುವ ಬಿಸಿ ಉಸಿರು ಬಾಯಿ ನೋಯದಂತೆ ಕಾಪಾಡುತ್ತದೆ!

ಡಿ.ಎಲ್.ಸುರೇಶ್, ಹರಪನಹಳ್ಳಿ
*ಮುಖ್ಯಮಂತ್ರಿಗಳ ವಿವೇಚನಾ ಕೋಟಾ ಎಂದರೇನು?*
ಅದು ಕೋಟಾ ಅಲ್ಲ, ಖೋತಾ!

ವೆಂಕಟೇಶ ಎಂ. ಪೈ, ಹೊನ್ನಾವರ
*ಸತ್ಯ ಸದಾ ಕಟುವಾಗಿರಲು ಕಾರಣವೇನು?*
ಸುಳ್ಳಿಗಾದರೆ ಮಸಾಲೆ ಬೆರೆಸಲಾಗುವುದರಿಂದ ಅದು ರುಚಿಕರ. ಸತ್ಯಕ್ಕೆ ಮಸಾಲೆ ಬೆರೆಸಲಾಗದಲ್ಲ!

ಎಚ್.ಆನಂದಕುಮಾರ್, ಚಿತ್ರದುರ್ಗ
*ಸಾಧನೆಗೂ, ಅದೃಷ್ಟಕ್ಕೂ ಏನು ವ್ಯತ್ಯಾಸ?*
ಸಾಧಕನಿಗೆ ಅದೃಷ್ಟ ಬೇಕು; ಅದೃಷ್ಟವಂತನಿಗೆ ಯಾವ ಸಾಧನೆಯೂ ಬೇಡ!

ಬಿ.ಎಚ್.ಮಾನಗೆ, ಹೊನ್ನಾವರ
*ಪ್ರೇಮಿಗಳಿಗೆ ಪಾಲಕರ ಪ್ರೀತಿಗಿಂತ ತಮ್ಮ ಪ್ರೀತಿಯೇ ದೊಡ್ಡದೇಕೆ?*
ಕಾವಿರುವ ಪ್ರೀತಿಯ ಮುಂದೆ ಕಾಳಜಿಯ ಪ್ರೀತಿ ಕುಬ್ಜ!

ಜಿ.ಮಂಜುನಾಥ, ಬಳ್ಳಾರಿ
*ದುಃಖದಲ್ಲಿಯೂ ಧೃತಿಗೆಡದಿರುವವರು ಯಾರು...?*



ತಿಥಿ ಮಾಡಿಸುವವರು, ಶವದ ಪೆಟ್ಟಿಗೆ ಮಾರುವವರು, ಗೋರಿ ತೋಡುವವರು...

■ ರಾಮ್